ಇರುವುದು ಅವನಿಗೆ ಸುತಾರಾಂ ಇಷ್ಟವಿರಲಿಲ್ಲ. ಬಟ್ಟೆಯ ವಿಷಯದಲ್ಲಿ ಅವನ ಕೆಣಕಿದರೆ, "ನನ್ಮಕ್ಕಳ ನೀವು ಬೀದಿಲಿ ಸುತ್ತೋ ಹುಡ್ಗೀರ ನೋಡೋಕೆ ಬರೋರು. ನಿಮ್ಗೆ ಮೇಕಪ್ಪು, ಸ್ಟೈಲು ಬೇಕು. ತೆವಲು, ಚಟ, ಐತೆ; ಎಲ್ಲಾ ಮಾಡ್ಕೊಂತೀರ. ನಂಗೆ ಯಾವಳು ನೋಡಿ ಏನಾಗ್ಬೇಕಾಗಿದೆ. ನಾನಿರೋದೆ ಹಿಂಗೆ. ಇದು ಒರ್ಜಿನಲ್ ಗೆಟಪ್ ಕಣಮ್ಮ" ಎನ್ನುತ್ತಿದ್ದ. ಆಗ ಟೈಲರ್‌ಶಿವು, "ಸ್ನಾನ ಮಾಡ್ದೆ ಇರೋದು ಒರ್ಜಿನಲ್ ಗೆಟಪ್ಪು ಕಣೋ. ಅಪ್ಪಿತಪ್ಪಿ ಮಾಡ್ಬಿಟ್ಟೆಯಾ" ಎಂದು ಅವನ ರೇಗಿಸುತ್ತಿದ್ದ.

ಟೈಲರ್ ಕುಮಾರನಿಗೆ ರಾಮು ಎಂಬ ಸಹೋದರನಿದ್ದ. ಆತ ಟೈಲರ್ ಕುಮಾರನ ಚಿಕ್ಕಮ್ಮನ ಮಗನಿರಬೇಕು. ನಮ್ಮ ಗುಂಪಿನಲ್ಲಿ ಅತಿ ಕಿರಿಯನೆಂದರೆ ಅವನೇನೆ. ಮನೆಯಲ್ಲಿ ಅಡಿಗೆ ಮಾಡೋರಿಲ್ಲ. ಅಮ್ಮನಿಗೆ ಕಾಯಿಲೆ ಎಂಬ ಎರಡು ಸರಳ ಕಾರಣಗಳಿಟ್ಟುಕೊಂಡು ಹದಿನೇಳನೇ ವರ್ಷಕ್ಕೆ ರಾಮುವಿಗೆ ಮದುವೆ ಮಾಡಿಬಿಟ್ಟರು. ನಮ್ಮ ಗ್ಯಾಂಗಿನಲ್ಲಿ ವಯಸ್ಸಾದ ಧಾಂಡಿಗರಿನ್ನೂ ಹಾದಿಬೀದಿಯಲ್ಲಿ ಲೈನು ಹಾಕುವಾಗ ರಾಮು ದಿಢೀರೆಂದು ಬಾಲ್ಯ ವಿವಾಹವಾಗಿ ಆಶ್ಚರ್ಯ ಹುಟ್ಟಿಸಿಬಿಟ್ಟ. ಎಲ್ಲರೂ ಅವನ ಗುಂಪಿನ ನಡುವೆ ಸಿಕ್ಕಿಸಿಕೊಂಡು ಮದುವೆ ನಂತರದ ರಹಸ್ಯ ವಿಷಯಗಳ ಹೇಳುವಂತೆ ಪೀಡಿಸತೊಡಗಿದರು. ಆತನಿಗೆ ನಾಚಿಕೆ. ಹೇಳಿಕೊಳ್ಳಲು ಸಂಕೋಚ. "ನೀವೆಲ್ಲಾ ದೊಡ್ಡವರು. ಸಣ್ಣ ಹುಡುಗನಿಗೆ ಕಾಡಿಸಿ ತೊಂದರೆ ಕೊಡಬಾರದು" ಎಂದು ಆತ ಮೃದುವಾಗಿ ಹೇಳುತ್ತಿದ್ದ. ಎಲ್ಲರಿಗೂ ಪುಕ್ಕಟ್ಟೆ ಕಾಮಶಾಸ್ತ್ರ ಕೇಳುವ ಕುತೂಹಲ. ತಲಾಗೊಂದೊಂದು ಪ್ರಶ್ನೆ ಕೇಳಿ ಅವನನ್ನು ಹಣ್ಣುಗಾಯಿ ನೀರುಗಾಯಿ ಮಾಡಿದಾಗ, "ಒಂದೇ ಒಂದ್ನಿಮಿಷ ಒಂದ ಮಾಡಿ ಬಂದು ಹೇಳ್ತೀನಿ" ಎಂದು ಎದ್ದು ಓಡಿ ಹೋದ ರಾಮು ಮತ್ತೆ ನಮ್ಮ ಸಂಘದ ಕಡೆ ತಲೆಯೇ ಹಾಕಲಿಲ್ಲ.

ರಾಮು ಬಹಳ ದೊಡ್ಡ ಮೋಸ ಮಾಡಿದ ಎಂದು ಎಲ್ಲರೂ ಬೇಸರ ಮಾಡಿಕೊಂಡರು. ಆಗ ಟೈಲರ್ ಶಿವು, "ನಾವೆಲ್ಲಾ ಸೇರಿ ರಾಮುಗೆ ಮದುವೆ ನಂತ್ರ ಬೇಕಾದ ಇದ್ಯಾ, ಬುದ್ಧಿ, ಚಮತ್ಕಾರ ಕಲಿಸಿ ಅವನಿಗೆ ಹುರುಪು ತುಂಬಬೇಕು. ಅದು ಬಿಟ್ಟು ಲೀಟರ್‌ಗಟ್ಲೆ ಜೊಲ್ಲು ಸುರಿಸ್ಕೊಂಡು ಅವನಪ್ಪನ ವಯಸ್ಸಾಗಿರೋ ನಾವೆಲ್ಲಾ ಪ್ರಣಯಕಥೆ ಕೇಳಕ್ಕೆ ಹೊಂಚು ಹಾಕಿದ್ದೀವಲ್ಲ. ಥೂ ನಮ್ಮ ಜನ್ಮಕ್ಕೆ ಹುಳಾಬೀಳಾ" ಎಂದು ಬೈದನು. "ಇಂಪಾರ್ಟೆಂಟ್ ಜನರಲ್ ನಾಲ್ಡೆಜ್ ತಿಳ್ಕೊಳೋದೆ ತಪ್ಪಾ" ಎಂದು ಕಣ್ಣನ್ ಮುಖ ಸಣ್ಣಗೆ ಮಾಡಿದನು. "ನಿಮ್ಮಪ್ಪ ಸರಿಯಾದ ಟೈಮಿಗೆ ಮದ್ವೆ ಮಾಡಿದ್ರೆ ರಾಮು ವಯಸ್ಸಿನ ಮಗಾ ಇರ್ತಿದ್ದ" ಎಂದು ಟೈಲರ್ ಶಿವು ಹೇಳಿದ್ದು ಕಣ್ಣನ್‌ಗೆ ಉರಿ ತಂದಿತು. ತನ್ನ ವಯಸ್ಸನ್ನು ಆದಷ್ಟು ಅದುಮಿಟ್ಟು ಚಿರ ಯುವಕತನ ತೋರಿಸಲು ಹೆಣಗುತ್ತಿದ್ದ ಕಣ್ಣನ್‌ಗೆ ಅವತ್ತು ದೊಡ್ಡ ಅವಮಾನ ಆಯಿತು. ಮಾತಿಗೆ ಮಾತು ಕಲೆತು ಗಲಾಟೆ ಜೋರಾಯಿತು. ಅವರಿಬ್ಬರ ಅಪ್ಪ, ಅಮ್ಮ, ಅಕ್ಕ, ತಂಗಿ ಎಲ್ಲರೂ ಬೈಗುಳಗಳಲ್ಲಿ ಬಂದು ತೇಲಿ ಹೋದರು. ಈ ಜಗಳ ನಿಲ್ಲಿಸುವುದು ಹೇಗೆಂದು ಎಲ್ಲರೂ ಚಡಪಡಿಸುವಾಗ ರೌಡಿ ಮನ್ಸೂರ್ ಬೇಲಿ ಸಾಲಿನ ಒಂದು ಕಂಬ ಮುರಿದು ತಂದು ಅಂಗಡಿಯ ಮುಂದೆ ಇಟ್ಟಿದ್ದ ಮರದ ಸ್ಟೂಲೊಂದು ಚಿಂದಿ ಚಿಂದಿಯಾಗುವಂತೆ ಪಟಾರೆಂದು ಹೊಡೆದು ಬಿಟ್ಟನು. ಆ ಶಬ್ದಕ್ಕೆ ಎಲ್ಲರೂ ಗರಬಡಿದಂತೆ ನಿಂತರು. 'ಮನ್ಸೂರ್ ಟೈಲರ್ ಶಿವುಗೋ ಕಣ್ಣನ್‌ಗೋ ಹೊಡೆಯಬೇಕಾದ ಹೊಡೆತ ಮಿಸ್ಸಾಗಿ ಸ್ಟೂಲಿಗೆ ಬಿದ್ದಿದೆ. ಅನ್ಯಾಯವಾಗಿ ಒಂದು ಖೂನಿಯೇ ಆಗುತ್ತಿತ್ತಲ್ಲ!' ಎಂದು ಎಲ್ಲರೂ ಗಾಬರಿಯಾದರು. ಆದರೆ, ರೌಡಿ ಮನ್ಸೂರ್ ಕಂಬ ಕಿತ್ತು ತಂದಿದ್ದೆ ಒಂದು ದೊಡ್ಡ ಶಬ್ದ ಉತ್ಪಾದಿಸಿ ಜಗಳ ಬಂದ್ ಮಾಡಲೆಂದು ಆಮೇಲೆ ತಿಳಿಯಿತು.

ಟೈಲರ್ ಕುಮಾರ ಮಾತ್ರ, "ಲೇ ಸಾಬಿ, ಮರ್ಯಾದೆಯಿಂದ ಹೊಸ ಸ್ಟೂಲ್ ಮಾಡಿಸಿಕೊಡು ಇಲ್ಲ ನಿನ್ನ ಬೀಜ ಕಿತ್ತಾಕ್ತಿನಿ" ಎಂದು ಹೊಸ ಜಗಳಕ್ಕೆ ನಿಂತ. "ಬೀಜ ತೊಗೊಂಡು ಏನ್ ಹುರ್ಕೊಂಡ್ ತಿಂತಿರಾ ಕುಮಾರಣ್ಣ. ಮೈನ್ ಫ್ರೆಂಡ್‌ಶಿಪ್ಪಲ್ಲಿ ಮಾರಾಮಾರಿ ಆಗ್ಬಾರ್ದು ಅಷ್ಟೆ. ಇಸ್ಕಿಮಾಕಿ